# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.12.2011**

## *ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರ್ವಜ್ಞನಗರ ವಿಭಾಗದಲ್ಲಿ ದಿನಾಂಕ: 09.12.2011 ರಂದು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.29, ಕಾಚರಕನಹಳ್ಳಿ ವಾರ್ಡ್‌ನಲ್ಲಿ ಬೆಳಿಗ್ಗೆ 8.30 ಗಂಟೆಯಿಂದ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ಕಾಮಗಾರಿ ಇಲಾಖೆಯ ಎಲ್ಲಾ ಅಭಿಯಂತರರು, ಕೆಲಸ ಪರಿವೀಕ್ಷಕರು, ಗ್ಯಾಂಗ್‌ಮೆನ್, ಪರಿಸರ ಇಲಾಖೆಯ ಅಭಿಯಂತರರು ಹಾಗೂ ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರುಗಳು ಭಾಗವಹಿಸಲಿದ್ದಾರೆ ಎಂದು ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.12.2011**

ಬೆಂಗಳೂರು ನಗರದ ಮತ್ತೊಂದು ವನಸಿರಿ ಜಯಪ್ರಕಾಶ್ ನಾರಾಯಣ್ ಜೈವಿಕ ಉದ್ಯಾನವನ 85 ಎಕರೆ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುತ್ತದೆ. ಈ ಉದ್ಯಾನವನ ಜಾಲಹಳ್ಳಿ ಮತ್ತು ಮತ್ತಿಕೆರೆ ನಡುಭಾಗದಲ್ಲಿದೆ. ವಾಯು ವಿಹಾರಕ್ಕಾಗಿ 4.5 ಕಿ.ಮೀ.ನಷ್ಟು ಉದ್ದದ ಸುಂದರವಾದ ಪಾದಚಾರಿ ಹಾಸನ್ನು ಈ ಉದ್ಯಾನವನದಲ್ಲಿ ನಿರ್ಮಿಸಲಾಗಿದ್ದು, ವಾಯು ವಿಹಾರ ಪ್ರಿಯರಿಗೆ ಹೇಳಿ ಮಾಡಿಸಿದ ಪ್ರಶಸ್ತ ತಾಣವಾಗಿದೆ. ಪ್ರತಿನಿತ್ಯ ಸಾವಿರಾರು ಜನ ತಮ್ಮ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ಉದ್ಯಾನವನಕ್ಕೆ ಭೇಟಿ ನೀಡುತ್ತಾರೆ.

ಈ ಉದ್ಯಾನವನದಲ್ಲಿ 20 ಸಾವಿರಕ್ಕೂ ಹೆಚ್ಚು ವಿವಿಧ ತಳಿಗಳ ಸಸ್ಯಸಂಕುಲವಿದೆ. ಹಾಗೂ 60 ಸಾವಿರಕ್ಕೂ ಹೆಚ್ಚು ವಿವಿಧ ಪ್ರಭೇದದ ಹೂಗಿಡಗಳಿಗೆ ಆಶ್ರಯ ನೀಡಿದೆ. ಇವುಗಳ ನಡುವೆ ವೈದ್ಯಕೀಯ ಮಹತ್ವವನ್ನು ಪಡೆದಿರುವ ಸುಮಾರು 5,000 ಗಿಡಮೂಲಿಕೆಗಳು ಆರೋಗ್ಯದ ತತ್ವ ಸಾರುತ್ತಿವೆ. ಈ ಉದ್ಯಾನವನ ಅಪಾರವಾದ ಗಿಡಮರಗಳನ್ನು ಹೊಂದಿರುವುದರಿಂದ ಪಕ್ಷಿ ಸಂಕುಲಕ್ಕೆ ಆಶ್ರಯ ತಾಣವಾಗಿದೆ.

ಜೆ.ಪಿ. ಉದ್ಯಾನವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಪ್ರೋತ್ಸಾಹಕ್ಕಾಗಿ ರಂಗಸಜ್ಜಿಕೆಯ ನಿರ್ಮಾಣವಾಗಿದೆ. 1000 ಆಸನಗಳ ಸಾಮರ್ಥ್ಯದ ಈ ರಂಗಸಜ್ಜಿಕೆಯಲ್ಲಿ ರಂಗನಾಟಕಗಳು, ಜಾನಪದ ಜಾತ್ರೆ, ಮೊದಲಾದ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಅಲ್ಲದೇ ಬೇಸಿಗೆ ಶಿಬಿರ, ಸಂಗೀತ ನೃತ್ಯ ಕಾರ್ಯಕ್ರಮಗಳು ಇಲ್ಲಿ ವಿಶೇಷವಾಗಿ ಜರುಗುತ್ತವೆ. ಮಕ್ಕಳ ಮತ್ತು ಮಹಿಳೆಯರ ಆಟಕ್ಕಾಗಿ ವಿಶೇಷ ಆಟಿಕೆಗಳನ್ನು ನಿರ್ಮಿಸಲಾಗಿದೆ. ಅದಲ್ಲದೇ ಹಿಂದೂ ಸಂಸ್ಕೃತಿ ಮಾತ್ರವಲ್ಲದೇ ವೈಜ್ಞಾನಿಕ ದೃಷ್ಠಿಯಿಂದ ಮಹತ್ವವುಳ್ಳ ನವಗ್ರವನ, ರಾಶಿವನ, ನಕ್ಷತ್ರವನ, ತಾಳೆವನ, ಮುಂತಾದವುಗಳನ್ನು ನಿರ್ಮಿಸಲಾಗಿದೆ. ಇಡೀ ದಕ್ಷಿಣ ಭಾರತದಲ್ಲಿ ಸುಸಜ್ಜಿತವಾದ, ಸೊಗಸಾದ, ಹಿರಿದಾದ ಸಂಗೀತ ನೃತ್ಯ ಕಾರಂಜಿ ಉದ್ಘಾಟನೆಗೆ ಸಿದ್ಧಗೊಂಡಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮೂರು ಕೋಟಿ ರೂ.ಗಳು ಹಾಗೂ ಪಾಲಿಕೆಯಿಂದ ಒಂದು ಕೋಟಿ ರೂ. ಒಟ್ಟು 4 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಸಂಗೀತ ನೃತ್ಯ ಕಾರಂಜಿಯು 45 X 12 ಮೀ. ವಿಸ್ತೀರ್ಣದ್ದಾಗಿರುತ್ತದೆ. 126 ಕ್ಕಿಂತಲೂ ಹೆಚ್ಚಿನ ಬಗೆ ಬಗೆಯ ಕಾರಂಜಿಗಳನ್ನು ಹೊರ ಹೊಮ್ಮಿಸುವ ಸಾಮರ್ಥ್ಯ ಹೊಂದಿದೆ. 37 X 9 ಮೀ. ವಿಸ್ತೀರ್ಣದ ಚೌಕಟ್ಟನ್ನು ಹೊಂದಿರುವ ಕಾರಂಜಿ ವಿದ್ಯುತ್‌ಚಾಲಿತ ಯಂತ್ರದಿಂದ ಕಾರ್ಯನಿರ್ವಹಿಸುತ್ತದೆ. ಉನ್ನತ ಇಂಧನ ಕ್ಷಮತೆಯ ಬದ್ಧತೆಯಿಂದಾಗಿ ಕಾರಂಜಿಗೆ ಬಳಕೆಯಾಗುವ ವಿದ್ಯುತ್‌ನಲ್ಲಿಯೂ ಉಳಿತಾಯವಾಗುತ್ತದೆ. ಮುಸ್ಸಂಜೆಯ ಮುದದಲ್ಲಿ ಸಂಗೀತ ಲಾಲಿತ್ಯದೊಂದಿಗೆ ನರ್ತಿಸುವ ರಂಗುರಂಗಿನ ಕಾರಂಜಿಗಳು ಹಾಗೂ ನವಿಲಿನ ಪ್ರತ್ಯೇಕಗಳು ಎಂಬಂತಿರುತ್ತವೆ. ಈ ಕಾರಂಜಿಯ ಪ್ರಾಯೋಗಿಕ ಕಾರ್ಯಾರಂಭಕ್ಕೆ (ಟ್ರಯಲ್ ರನ್) ಇಂದು ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಚಾಲನೆ ನೀಡಿದರು.

ಅದಲ್ಲದೇ ಈ ಉದ್ಯಾನವನದಲ್ಲಿ ಇಡೀ ನಗರದಲ್ಲಿ ಅತೀ ದೊಡ್ಡದಾದಂತಹ ಮತ್ತು ಹಲವಾರು ವೈಶಿಷ್ಟ್ಯದಿಂದ ಕೂಡಿದಂತಹ ಈಜುಕೊಳ ಕೂಡಾ ಉದ್ಘಾಟನೆಗಾಗಿ ಸಿದ್ಧಗೊಂಡಿದೆ.

ಈ ಸಂದರ್ಭದಲ್ಲಿ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್, ಪಾಲಿಕೆಯ ಆಯುಕ್ತರಾದ ಶ್ರೀ ಎಂ.ಕೆ. ಶಂಕರಲಿಂಗೇಗೌಡ, ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ಮತ್ತು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ರಾಮಚಂದ್ರ ರವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**